**ಓ.ಎಸ್.ನಂ. 134/2019**
**ಪಿ ಡಬ್ಲ್ಯೂ 3**

**ಸಾಕ್ಷಿಯು ದಿನಾಂಕಃ 07-03-2026 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ವಾದಿಯ ಮುಂದುವರೆದು ಮುಖ್ಯ ವಿಚಾರಣೆ ಶ್ರೀ ಕೆ ಪಿ ವಕೀಲರಿಂದಃ</u>**

ನಾನು ನನ್ನ ಮುಖ್ಯ ವಿಚಾರಣೆಗಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು ಸದರಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿ ಬರೆಯಿಸಿದ್ದು ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ನನಗೆ ಗೊತ್ತು ಮತ್ತು ಅದರಲ್ಲಿರುವ ಸಹಿಗಳು ನನ್ನದಾಗಿವೆ.

ಪ್ರತಿವಾದಿ ವಾದಿಗೆ ಬರೆದುಕೊಟ್ಟ ಅವಧಿ ವಿಸ್ತರಣಾ ಪತ್ರವನ್ನು ನಾನೇ ತಯಾರಿಸಿರುತೆತೇನೆ ಅದರಿ ಪತ್ರಕ್ಕೆ ವಾದಿ ಪ್ರತಿವಾದಿ, ಸಾಕ್ಷಿದಾರ ಮಹದೇವ ಮತ್ತು ನಾನು ಸಹಿ ಮಾಡಿುರತ್ತೇವೆ ಸಾಕ್ಷಿ ನಿಪಿಃ 2(ಎ) ಯಿಂದ 2(ಸಿ) ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿಃ 2(ಡಿ) ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲು ಪ್ರತಿವಾದಿ ಪರ ಶ್ರೀ ಎಸ್.ಎಲ್. ಬಿ ವಕೀಲರಿಂದ</u>**

ನಾನು 1994-95 ರಿಂದ ಪತ್ರ ಬರಹಗಾರನಾರಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಸಾಕ್ಷ್ಯ ನುಡಿಯಲು ಬರುವಂತೆ ವಾದಿ ಪರ ವಕೀಲರು ತಿಳಿಸಿರುತ್ತಾರೆ. ನನ್ನ ಪ್ರಮಾಣ ಪತ್ರವನ್ನು ವಕೀಲರು ತಯಾರಿಸಿರುತ್ತಾರೆ. ನಾನು ಪ್ರಕರಣದಲ್ಲಿನ ದಾಖಲೆಗಳನ್ನು ನೋಡಿ ಪ್ರಕರಣದ ವಿಷಯವನ್ನು ತಿಳಿದುಕೊಂಡಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯದಲ್ಲೇ ನೋಡಿರುತ್ತೇನೆ. ನಾನು ನ್ಯಾಯಾಲಯಕ್ಕೆ

ಬಂದು ದಾಖಲೆಗಳ ನೆರಳಚ್ಚು ಪ್ರತಿಯನ್ನು ನೋಡಿ ವಿಷಯ ತಿಳಿದುಕೊಂಡಿರುತ್ತೇನೆ. ಸದರಿ ದಾಖಲೆಗಳನ್ನು ವಾದಿ ಪರ ವಕೀಲರು ನನಗೆ ತೋರಿಸಿದ್ದರು.

ದಿಃ 15-05-2017 ರ ಕರಾರು ಪತ್ರದಲ್ಲಿ ಪಕ್ಷಗಾರರ ಹೆಸರುಗಳು ಏನಿರುತ್ತವೆ ಎಂದು ನನಗೆ ನೆನಪಿಲ್ಲ. ನನ್ನ ಸಮಕ್ಷಮ ರೂ. 10,000/- ಗಳನ್ನು ವಾದಿಯಿಂದ ಪ್ರತಿವಾದಿ ಪಡೆದರು ಎಂದು ದಾಖಲೆ ನೋಡಿ ಹೇಳಬಲ್ಲೆ. ಸದರಿ ದಾಖಲೆ ಒಂದೇ ಪುಟ ಇತ್ತು. ಅದರ ಮೇಲೆ ಸಹಿ ಮಾಡಿದವರ ಹೆಸರುಗಳು ನೆನಪಿಲ್ಲ, ನೋಡಿದರೆ ಹೇಳಬಲ್ಲೆ. ಎಷ್ಟು ಜನ ಸಹಿ ಮಾಡಿದರು ಎಂದು ಹೇಳಲು ಆಗುವುದಿಲ್ಲ ಅಂದರೆ ಸರಿ. ಪ್ರಮಾಣ ಪತ್ರವನ್ನು ಇದೇ ದಿನ ತಯಾರಿಸಲಾಯಿತು. ಸದರಿ ಪ್ರಮಾಣ ಪತ್ರವನ್ನು ಒದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ರೂ. 10,000/- ಗಳನ್ನು ಪ್ರತಿವಾದಿ ಪಡೆದಿದ್ದರೂ ಮತ್ತು ಆ ಸಂಬಂಧ ನಿಪಿಃ 2 ರ ದಾಖಲೆ ಬರೆಯಲಾಗಿತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿ ಗಂಡಸೋ ಹೆಂಗಸೋ ಎಂದು ದಾಖಲೆಯನ್ನು ನೋಡಿದರೆ ಹೇಳಬಲ್ಲೆ. ಸಾಕ್ಷಿ ದಾಖಲೆಯನ್ನು ನೋಡಿ ಲಲಿತಮ್ಮ ಮತ್ತು ರಾಘು ಎಂದು ನುಡಿಯುತ್ತಾರೆ. ಸದರಿಯವರುನ್ನು ನಾನು ನೋಡಿರುತ್ತೇನೆ. ವಾದಿಗೆ ಮತ್ತು ಪ್ರತಿವಾದಿಗೆ ವಯಸ್ಸು ಎಷ್ಟಿರಬಹುದು ಎಂದು ನನಗೆ ಗೊತ್ತಿಲ್ಲ. ಪಕ್ಷಗಾರರನ್ನು ನೋಡದೆ ನಿಪಿಃ 2 ದಾಖಲೆಯನ್ನು ಬರೆದಿರುತ್ತೇನೆ ಅಂದರೆ ಸರಿಯಲ್ಲ. ನಿಪಿಃ 2 ನನ್ನ ಸಮಕ್ಷಮ ಬರವಣಿಗೆ ಆಗಿರದ ಕಾರಣವೇ ಪಕ್ಷಗಾರರ ಹೆಸರು, ವಯಸ್ಸು ಮತ್ತು ವಿಳಾಸ ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ನಾನು ಯಾವುದೇ ದಾಖಲೆಯನ್ನು ಬರೆದರೆ ಅದರ ಮೇಲೆ ಆ ದಾಖಲೆಯ ರಿಜಿಸ್ಟರ್ ಸಂಖ್ಯೆ ಬರೆಯುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನೊಂದಣಿ ಆದರೆ ಮಾತ್ರ ಬರೆಯುತ್ತೇನೆ ಎಂದು ನುಡಿಯುತ್ತಾರೆ. ಅವಧಿ ವಿಸ್ತರಣಾ ಪತ್ರವನ್ನು ಬರೆದಾಗ ಮೊದಲಿಗೆ ಆದ ಕರಾರು ಪತ್ರದ ದಿನಾಂಕ ಮತ್ತು ನೊಂದಣಿ ಸಂಖ್ಯೆ

ಗಳನ್ನು ಬರೆಯಬೇಕಾಗುತ್ತದೆ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ದಾಖಲೆ ಆಗಿಲ್ಲ, ವಕೀಲರು ತಯಾರಿಸಿ ತಂದಿದ್ದ ದಾಖಲೆಗೆ ಸಹಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಅಂದರೆ ಸರಿಯಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೇ. ಕೆ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.